**‘ಹೊಸ ಕನಸುಗಳಿಂದ ನಳನಳಿಸುತ್ತಿದ್ದ ಎಳೆ ರೆಂಬೆಯೊಂದು ಜೀವಂತವಾಗಿ ಬೆಂದು ಹೋಗುವ ಹೃದಯವಿದ್ರಾವಕ ಘಟನೆಗಳಿಗೆ ಅವನು ಸಾಕ್ಷಿಯಾಗಿದ್ದ. ಅಗ್ನಿ ಸಾಕ್ಷಿಯಾಗಿ ಕೈಹಿಡಿದವನೇ ಮರಣಮೃದಂಗದ ರೂವಾರಿಯಾಗಿದ್ದ ಅಮಾನವೀಯತೆಗೆ ತಕ್ಕಡಿ ಹಿಡಿಯುವ ಕಾಯಕದಲ್ಲಿ ಅವನ ಜೀವದ್ರವ್ಯ ಅನೇಕ ಬಾರಿ ಸೋರಿ ಹೋಗುತ್ತಿತ್ತು...**

ಹಿಡಿದಿದ್ದರು. ಅವರ ಊಟ ಟೇಬಲ್ ಮೇಲೆ ಕಾಯುತ್ತಿತ್ತು. ಸಾಮಾನ್ಯವಾಗಿ ಊಟ ಮಾಡುವಾಗ ಅವನು ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಆದರೆ ಇಂದು ಮೊದಲ ತುತ್ತಿನೊಡನೆ ಅವನು ಮಗಳ ಜೊತೆ ಮಾತನಾಡಲಾರಂಭಿಸಿದ. ಬೆಳಬೆಳಗ್ಗೆ ರಾಬಿಯಾ ಅವನಿಗೆ ನೆನಪಿಸಿದ್ದಳು. ಹೀಗಾಗಿ ಅವನು ಎಂದಿಗಿಂತ ಹೆಚ್ಚಿನ ಆತ್ಮೀಯತೆಯಿಂದ ಮತ್ತು ಪ್ರೀತಿಯಿಂದ ಅವಳೊಡನೆ ಮಾತನಾಡಿ ಅವಳ ಹುಟ್ಟುಹಬ್ಬವನ್ನು ನೆನಪಿಸಿದ. ಶುಭಾಶಯಗಳನ್ನು ಹೇಳುವುದೆಂದರೆ ಅವನಿಗೆ ಒಗ್ಗದ ಕೆಲಸ. ಆ ದಿನ ಸಂಜೆ ಅವಳು ಮನೆಗೆ ಬರುವವಳಿದ್ದಳು. ಅವಳು ತನ್ನ ಉದ್ಯೋಗದ ನಿಮಿತ್ತ ಮಹಾನಗರದಲ್ಲಿ ವಾಸ್ತವ್ಯ ಹೂಡಿದ್ದ ಮೂರು ವರ್ಷಗಳಿಂದಲೂ ಅದೇ ಸಂಪ್ರದಾಯ ನಡೆದು ಬಂದಿತ್ತು. ತಾನು ಆ ದಿನ ಬಿಡುವು ಮಾಡಿಕೊಳ್ಳಬೇಕಿತ್ತು ಎಂದು ಅವನಿಗೆ ಅನಿಸಿತ್ತು. ಆದರೆ ಅವಳು ಬರುವುದೇ ಸಂಜೆಯ ನಂತರ. ಇನ್ನೂ ಮನೆಯಲ್ಲಿದ್ದು ರಾಬಿಯಾಳ ಕಿರಿಕಿರಿಯನ್ನು ಅನುಭವಿಸುವುದಕ್ಕಿಂತ ಕೆಲಸ ಮಾಡುವುದೇ ಮೇಲು ಎಂದು ತನ್ನ ತೀರ್ಮಾನಕ್ಕೆ ತಾನೇ ಖುಷಿಪಟ್ಟ.

ಈ ಹಿಂದೆಯೇ ಅಂದರೆ ಒಂದು ವರ್ಷದ ಹಿಂದಿನ ಅವಳ ಹುಟ್ಟು ಹಬ್ಬದಂದು ಅವನು ಮಗಳೊಡನೆ ಹೇಳಿದ್ದ, ‘ನೋಡು ನಾನು ಮರ್ಯಾದೆಗಾಗಿ ಬದುಕಿ, ಮರ್ಯಾದೆಗಾಗಿ ಸಾಯುವ ಮನುಷ್ಯ. ನೀನೇನಾದರೂ ಯಾರೊಡನೆಯಾದರೂ ಅಫೇರ್ ಮಾಡಿಕೊಂಡಲ್ಲಿ ನನ್ನ ಹೆಣ ನೋಡಬೇಕಾಗುತ್ತೆ.’ ಅವಳು ನಕ್ಕುಬಿಟ್ಟಳು.

‘ಇಲ್ಲ ಪಪ್ಪ, ನಾನು ಅಂತಹದೇನೂ ಮಾಡುವುದಿಲ್ಲ. ನೀವೇ ನನಗಾಗಿ ಗಂಡು ಹುಡುಕಿ. ನನಗೇನೂ ಸಮಸ್ಯೆಯಿಲ್ಲ. ಆದರೆ ಪಪ್ಪ ನನಗೆ ಗಾಬರಿಯಾಗುವುದು ನಿಮ್ಮ ಎದುರಿಗೆ ನ್ಯಾಯ ಕೇಳಿ ಕೈಮುಗಿದು ನಿಲ್ಲುತ್ತಾರಲ್ಲ ಆ ಹೆಣ್ಣು ಮಕ್ಕಳ ಬಗ್ಗೆ. ಇಂಥ ಮೇಲ್ ಚುವಾನಿಸ್ಟಿಕ್ ಆಟಿಟ್ಯೂಡ್ ಇಟ್ಟುಕೊಂಡು ನೀವು ಆ ಹೆಣ್ಣು ಮಕ್ಕಳಿಗೆ ಎಂತಹ ನ್ಯಾಯದಾನವನ್ನು ನೀಡುವಿರಿ?’ ಎಂದು ಮುಲಾಜಿಲ್ಲದೆ ಚಾಟಿಯನ್ನು ಬೀಸಿ ಅವಳು ಬಿಂದಾಸ್ ಆಗಿ ನಡೆದಿದ್ದಳು. ಅದರ ಜೊತೆಗೆ ಮಾರ್ಮಿಕವಾದ ಒಂದು ತೆಳು ನಗೆಯೊಂದಿಗೆ, ‘ನೀವು ಯಾವೊತ್ತಿಗೂ ಕೂಡಾ ಅಪ್‌ಡೇಟ್ ಆಗೋದಿಲ್ಲ ಪಪ್ಪ ನಿಮ್ಮ ಕಾನೂನಿನಂತೆ. ಅದೇ ತುಕ್ಕು ಹಿಡಿದ ಹಳೆಯ ಗಡಿಯಾರವನ್ನು ಸದಾಕಾಲ ನೋಡ ನೋಡುತ್ತಾ ಕಾಲ ಬದಲಾವಣೆಯಾಗೋದಿಲ್ಲ ಅಂತ ಪಟ್ಟು ಹಿಡಿದಂತಿದೆ ನೀವು. ದೂಳು ಹಿಡಿದ ದಪ್ಪ ಪುಸ್ತಕಗಳು ಸತ್ತು ಅದು ಯಾವ ಕಾಲವಾಗಿದೆಯೋ? ಅವುಗಳ ಉದುರುವ ಪುಟಗಳ ಮೂಲಕವೇ ನೀವು ಜೀವಂತ ಬದುಕುಗಳ ನಿರ್ದೇಶನ ಮಾಡಬೇಕು ಅಲ್ಲವಾ? ಒಂದು ಪುಸ್ತಕ ಸಾಯೋದು ಅಂದರೆ ಏನು ಗೊತ್ತಾ ಪಪ್ಪ ನಿಮಗೆ?’ ಅವನು ದಿಗ್ಭ್ರಮೆಯಿಂದ ಅವಳನ್ನೇ ನೋಡ ತೊಡಗಿದ್ದ. ಮಾತು ಮರೆತು ಹೋಗಿತ್ತವನಿಗೆ.